1887ನೇ ಇಸವಿ ಅರ್ಜೀ ನಂಬರ್ 15.

ಮೃತಪಟ್ಟ ಮರೀಚಿ ರಾಜಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಮರೀಚಿ ಹುಚ್ಚರಾಯಾಚಾರ್, 2ನೇ ಸೇತು ಮಾಧವಾಚಾರ್, 3ನೇ ಕೃಷ್ಣಾಚಾರ್ ಮೈನರ್‌ಗಳು ಗಾರ್ಡಿಯ್ಯ ಸದರೀಯವರ ಸೋದರಮಾವ ಸತ್ಯಸಂಧಾಚಾರ್, ಮೃತಪಟ್ಟ ಸದರೀ ಮರೀಚಿ ರಾಜಾಚಾರ್ರಿಗೆ ಸದರೀ ಮೈನರ್‌ಗಳು ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ಮೈನರ್‌ಗಳ ಗಾರ್ಡಿಯ್ಯ ತೀರ್ಥಹಳ್ಳಿ ತಾಲ್ಲೂಕು ಕೋನೇರಿಪುರದಲ್ಲಿರುವ ಸತ್ಯಸಂಧಾಚಾರಿ ಸದರೀ ಕೋನೇರಿಪುರದ ವಾಸಸ್ಥರಾಗಿ ಮೃತಪಟ್ಟ ಮರೀಚಿ ರಾಜಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ಸದರೀ ಮೈನರ್‌ಗಳಿಗೋಸ್ಕರ ವಸೂಲ್ ಮಾಡುವಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್' ಮಾಡಿರುತ್ತಾನೆ.

ಸದರೀ ದರಖಾಸ್ತು ದಾರನಾದ ಸತ್ಯಸಂಧಾಚಾರ್ರ ಅರ್ಜೀಯನ್ನು 1887ನೇ ಇಸವಿ ಮಾರ್ಚಿ ತಿಂಗಳು ತಾರೀಖು 1ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಮರೀಚಿ ರಾಜಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂತ ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 16.

ಮೃತಪಟ್ಟ ನವಕೋಟಿ ನಾರಣಪ್ಪನ ಆಸ್ತೀ ವಿಷಯದಲ್ಲಿ.—

ಅರ್ಜೀದಾರ್ರು ಗಣಪ್ಪಯ್ಯ, ಮೃತಪಟ್ಟ ಸದರೀ ನವಕೋಟಿ ನಾರಣಪ್ಪನಿಗೆ ಸೋದರಮಾವನ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಸೊರಬ ತಾಲ್ಲೂಕು ಕುಂಟಗಳಲೆ ಮಜರೆ ಬಾಳಿಕೊಪ್ಪದಲ್ಲಿರುವ ಗಣಪ್ಪಯ್ಯನು ಸೊರಬ ತಾಲ್ಲೂಕು ಶಿಂಡ್ಲಿ ವಾಸಸ್ಥನಾಗಿ ಮೃತಪಟ್ಟ ನವಕೋಟಿ ನಾರಣಪ್ಪನ ಜಿದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್' ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗಣಪ್ಪಯ್ಯನ ಅರ್ಜೀಯನ್ನು 1887ನೇ ಇಸವಿ ಮಾರ್ಚಿ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನವಕೋಟಿ ನಾರಣಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಫಿಬ್ರವರೀ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಕಡೂರು ಡಿಸ್ಟ್ರಿಕ್ಟು

ತಾರೀಖು 21ನೇ ಜನವರೀ 1887.

ಇದರಿಂದ ತಿಳಿಯಪಡಿಸುವದೇನಂದರೆ, ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕಿನಲ್ಲಿ ಕಾಫೀ ಸಾಗುವಳೀ ಬಗ್ಯೆ ದರಖಾಸ್ತು ಮಾಡಲ್ಪಟ್ಟಿರುವ ಈ ಕೆಳಗೆ ನಮೂದಾಗುವ ಜಮೀನ್‌ಗಳನ್ನ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಮುಂಜಾರಾತಿಗೆ ಪೊಳಪಟ್ಟು, ಮೂಡಿಗೆರೆಯಲ್ಲಿ—1887ನೇ ಇಸವಿ ಫಿಬ್ರವರೀ ತಾರೀಖು 22ನೇ ಮಂಗಳವಾರದ ಪ್ರಾತಃಕಾಲ 11 ಘಂಟೆಗೆ ಮೂಡಿಗೆರೆ ತಾಲ್ಲೂಕು ಆಮಲ್‌ದಾರ್ರ ರೂಬರೂ ಬಹಿರಂಗವಾದ ಹರಾಜಿನ ಮೂಲಕ ವಿಕ್ರಯಿಸಲ್ಪಡುವವು.

ಚಡ ದರಖಾಸ್ತುದಾರನು ಹರಾಜು ಶೈದಾದ ಕೂಡ್ಲೆ ಹರಾಜಿನ ಮೊಬಲಗ ಪೈಕಿ ಶೇಕಡಾ 25 ರೂಪಾಯಿ ಮೇರಿಗೆ ಹಾಜರ್ಮಾಡತಕ್ಕದ್ದು. ಬಾಕೀ ಉಳಿಯುವ ಮೊಬಲಗನ್ನ ಜಾರೀಲಿರುವ ರೂಲ್ಸ್‌ನಲ್ಲಿ ವಿಧಿಸಿರುವ ಮೇರಿಗೆ 15 ದಿವಸಗಳೊಳಗಾಗಿ ಪಾವತೀ ಮಾಡತಕ್ಕದ್ದು.

ದ್ದು. ಇದಕ್ಕೆ ತಪ್ಪಿದಲ್ಲಿ ಆ ಜಮೀರ್ಗಳನ್ನ ಅಂತಾ ತಪ್ಪಿತಸ್ಥನ ಲುಕಸಾನಿಗೆ ವೊಳಪಟ್ಟು ಪುನಹ ಹರಾಜು ಮಾಡಲ್ಪಟ್ಟು ಆಗ್ಯೆ ಯೇ ನಾದರೂ ಕಮ್ಮಿಯಾಗುವ ಮೊಬಲಗನ್ನ ಆವ್ವಲ್ ದರಖಾಸ್ತುದಾರನೇ ಭರ್ತೀ ಮಾಡಬೇಕಾಗುವದು.

ಸ್ಕೀಂ ನಂಬರ್.	ದರಖಾಸ್ತುದಾರರ ಹೆಸರು.	ಪಟ್ಟಿನ ಹೆಸರು ಮತ್ತು ಜಿಲ್ಲೆ.	ಸರಹದ್ದುಗಳು.	ವಿಸ್ತೀರ್ಣ. ಎಕರೆ	ವಿಸ್ತೀರ್ಣ. ಗುಂಟೆ	ಕಂದಾಯ.		
153	ಮಂಗಳೂರಲ್ಲಿರುವ ಬೆಳಗಲ್ ಜ್ಯೂಡ್ಯೂನುಯಲ್ ಕೊಯಲಹೊ.	ನಂಜನಗೂಡು ತಾಲ್ಲೂಕು ಕೆಲೂರು ಹೋಬಳಿ ಕೂಡಹಳ್ಳಿ ಗ್ರಾಮ	ಪೂರ್ವಕ್ಕೆ—ಸರ್ವೆ ನಂಬರ್ 146 ವ 149 ಪಶ್ಚಿಮಕ್ಕೆ—ಡಿಟೋ ನಂ. 154 ವ ಕೆರೆ ನಂ. 155 ದಕ್ಷಿಣ—ಡಿಟೋ ನಂ. 126 (ಗುಟ್ಟ) ಉತ್ತರ— ,, ನಂ. 156 ವ 162	13	8	13	0	0
154	1ನೇ ಡಿಟೋ 2ನೇ ಕೂಡಹಳ್ಳಿ ಅರಸೇ ಗೌಡ		ಪೂರ್ವ—ಸರ್ವೆ ನಂಬರ್ 153 ಪಶ್ಚಿಮ—ಕೂಡಹಳ್ಳಿ ಗ್ರಾಮದ ಸರಹದ್ದು ದಕ್ಷಿಣ—ಸರ್ವೆ ನಂ. 126 ಅಂದರೆ ಗುಟ್ಟ ಉತ್ತರ—ಡಿಟೋ 155 ಅಂದರೆ, ಒಂದು ಕೆರೆ ವ ಕೂಡಹಳ್ಳಿ ಗ್ರಾಮದ ಸರಹದ್ದು	11	..	11	0	0
156	ಮಂಗಳೂರಲ್ಲಿರುವ ಬೆಳಗಲ್ ಜ್ಯೂ ಡ್ಯೂನುಯಲ್ ಕೊಯಲಹೊ		ಪೂರ್ವ—ಸರ್ವೆ ನಂಬರ್ 161 ಪಶ್ಚಿಮ—ಕೂಡಹಳ್ಳಿ ಗ್ರಾಮದ ಸರಹದ್ದು ದಕ್ಷಿಣ—ಸರ್ವೆ ನಂಬರ್ 153 ವ 162 ಉತ್ತರ—ಡಿಟೋ ನಂ. 157 ವ 158 ವ ಕೂಡಹಳ್ಳಿಗ್ರಾಮದ ಸರಹದ್ದು	17	7	17	0	0
157	ಡಿಟೋ		ಪೂರ್ವ—ಸರ್ವೆ ನಂಬರ್ 156 ಪಶ್ಚಿಮ—ಡಿಟೋ ದಕ್ಷಿಣ—ಡಿಟೋ ಉತ್ತರ—ಕೂಡಹಳ್ಳಿ ಗ್ರಾಮದ ಸರಹದ್ದು	2	8	2	0	0
			ಜಮ್ಲಾ..	43	23			

ಷರಾ—ಸರ್ಕಾರ್ ಸವಾಲ್ ಯಕರೆ 1ಕ್ಕೆ 5 ರೂಪಾಯಿ ನಿಷ್ಕರ್ಷೆ ಆಗಿರುತ್ತೆ, ಈ ಖರೀದಿಯ ದೆಸೆಯಿಂದ ತೋಟಗಳಲ್ಲಿರುವ ಗಂಧದ ಮರಗಳ ವಿನಾ ತಮಾಂ ಮರಳಿಗಾಗಿ ಖರೀದಿದಾರನಿಗೆ ಹಕ್ಕು ಉಂಟಾಗಿರುತ್ತೆ, ಮರಗಳನ್ನ ಕಡಿದು ಸಾಗಿಸುವ ವಿಷಯದಲ್ಲಿ ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ರವರಿಂದ ವಿಧಿಸಲ್ಪಡುವ ಷರತ್ತುಗಳಿಗೊಳಪಟ್ಟು ಸದರೀ ಜಮೀರ್ಗಳು ಹರಾಜು ಹಾಕಲ್ಪಡುವದು.

ಕೃಷ್ಣಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ದಿವಾಳಿಯಾದ ಡಿಕ್ರೀ ದೇಣೇದಾರ ಮಾನೇಗಾರ ಮಲ್ಲನ ವಿಷಯದಲ್ಲಿ—

1887ನೇ ಇಸವಿ ದಿವಾಳಿ ಕೇಸ್ ನಂಬರ್ 1.

ಹುಕ್ಕುಂ.

ಮೇಲ್ಕಂಡ ಮಾನೇಗಾರ ಮಲ್ಲನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟು ರೂಬರೂ ಅರ್ಜಿದಾರನಾದ ಮಾನೆಗಾರ ಮಲ್ಲನ ಎದುರಿಗೂ ಮತ್ತು ಸದರೀಯವನ ಲೇಣೇದಾರ್ರಾದ ಆದಿರಂಗ ಸ್ವಾಮಿ ಅರ್ಚಿಕ ಸುಬ್ಬಾಭಟ್ಟ ಯಂಬವನ ಎದುರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.